**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಸಿಸಿ ನಂಃ 463/2024**

**ಸಿಡಬ್ಲ್ಯೂ-2 ಪಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | : | ಮರಿಯಣ್ಣ |
| ತಂದೆಯ ಹೆಸರು | : | ಲೇಟ್ ಈರಣ್ಣ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಆರ್.ಎಸ್.ಎ. ಉಪನಿರೀಕ್ಷಕರು, ಚನ್ನಪಟ್ಟಣ. |
| ವಾಸಸ್ಥಳ | : | ಚನ್ನಪಟ್ಟಣ. |

**ಸಾಕ್ಷಿಗೆ ದಿನಾಂಕಃ 22.01.2026 ರಂದು ಪ್ರಮಾಣ ಮಾಡಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿ.24.12.2019 ರಿಂದ 28.02.2025 ರವರೆಗೆ ಮೈಸೂರಿನ ಡಿ.ಎ.ಆರ್.ನಲ್ಲಿ ಆರ್.ಎಸ್.ಎ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.03.12.2022 ರಂದು ಮಾನ್ಯ ಎಸ್.ಪಿ. ರವರು ನನಗೆ ಕರೆ ಮಾಡಿ ಮಾಹಿತಿಯನ್ನು ನೀಡಿದ್ದು, ಅದರಂತೆ ನಾನು ರಾತ್ರಿ 8.30 ರ ಸಮಯಕ್ಕೆ ಮಾವಿನಹಳ್ಳಿ ಗ್ರಾಮದ ಗೇಟ್ ಬಳಿ ನಾನು ಮತ್ತು ಚಾ.ಸಾ.3 ರವರು ಹೋಗಿದ್ದು ಅಲ್ಲಿ ಕಾಯುತ್ತಿರುವಾಗ ರಾತ್ರಿ 9.40 ರ ಸಮಯದಲ್ಲಿ ವಾಹನದ ಸಂ.ಕೆ.ಎ.40-4383 ಈಚರ್ ಟೆಂಪೋ ವಾಹನ ಬಂದಿದ್ದು ಅದನ್ನು ಪರಿಶೀಲಿಸಿ ವಾಹನದ ದಾಖಲೆಗಳನ್ನು ಕೇಳಿದಾಗ ಅವರು ನಿರಾಕರಿಸಿದ್ದು, ವಾಹನವ್ನನ ಪರಿಶೀಲಿಸಿದಾಗ ಮೇಲ್ನೋಟಕ್ಕೆ ವಾಹದಲ್ಲಿ ಇರುವುದು ಪಡಿತರ ಅಕ್ಕಿ ಎಂದು ತಿಳಿದುಬಂದಿರುತ್ತದೆ. ನಂತರ ವಾಹನ ಮತ್ತು ವಾಹನದ ಚಾಲಕರನ್ನು ತಲಕಾಡು ಪೋಲಿಸ್ ಠಾಣೆಗೆ ಚಾ.ಸಾ.7 ರವರಿಗೆ ಹಸ್ತಾಂತರಿಸಿರುತ್ತೇನೆ. ಚಾಸಾ.7 ರವರು ಚಾ.ಸಾ.1 ರವರಿಗೆ ಕರೆ ಮಾಡಿ ಅನ್ನಭಾಗ್ಯ ಅಕ್ಕಿಯ ಬಗ್ಗೆ ಪರಿಶೀಲಿಸಿ ವರದಿ ನೀಡವಂತೆ ಕೇಳಿರುತ್ತಾರೆ. ತಲಕಾಡು ಪೋಲಿಸ್ ಠಾಣೆಯಲ್ಲಿ ವಾಹನದಲ್ಲಿದ್ದ ಅಕ್ಕಿಯ್ನನು ಪರಿಶೀಲನೆ ಮಾಡಿದಾಗ ಅದರಲ್ಲಿ 142 ಅಕ್ಕಿ ಚೀಲಗಳು ಇರುವುದು ಕಂಡುಬಂದಿರುತ್ತದೆ. ಒಂದು ಚೀಲದ್ಲಲಿ 42 ಕೆ.ಜಿ. ಅಕ್ಕಿ ಇರುತ್ತದೆ. ಒಟ್ಟು 59 ಕ್ವಿಂಟಾಲ್ 64 ಕೆ.ಜಿ. ಅಕ್ಕಿ ಇರುತ್ತದೆ. ನಂತರ ಮಹಜರ್ ನ್ನು ರಾತ್ರಿ 1.30 ರಿಂದ 3.30 ರವರೆಗೆ ಪೋಲಿಸ್ ಠಾಣಾ ಆವರಣದಲ್ಲಿ ಜರುಗಿಸಿದ್ದು, ಆ ಸಮಯದಲ್ಲಿ ಚಅಸಾ.1, 3 ಹಾಗೂ ಚಾಸಾ.4 ಮತ್ತು 5 ರವರು ಹಾಜರಿದ್ದರು. ಈ ಸಂಬಂಧ ನಾನು ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು 5 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.1 ಎಂದು, ಸಾಕ್ಷಿಯು ಸಿ.ಡಿ.ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಆರೋಪಿಗಳು ಗೈರು ಹಾಜರಿದ್ದು, ಅವರುಗಳನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ.1 ರವರಿಗೆ ಅಮಾನತ್ತುಪಡಿಸಿಕೊಂಡ ಅಕ್ಕಿಯನ್ನು ಹಸ್ತಾಂತರಿಸಿರುತ್ತಾರೆ.

**ಪಾಟೀ ಸವಾಲು: ಶ್ರೀ ಎಂ.ಎಸ್.ಆರ್. ವಕೀಲರಿಂದ:**

ನನಗೆ ಕರೆ ಬಂದಾಗ ನಮ್ಮ ಕಛೇರಿಯಲ್ಲಿ ಇದ್ದೆನು. ನನ್ನ ಕರ್ತವ್ಯದ ಅವಧಿ ಬೆಳಿಗ್ಗೆ 10.00 ಗಂಟೆಯಿಂದ 6.00 ಗಂಟೆಯವರೆ ಇರುತ್ತದೆ. ನನಗೆ ಕರೆಯು ರಾತ್ರಿ 7.00 ಗಂಟೆಗೆ ಬಂದಿರುತ್ತದೆ. ವಾಹನವು ಕೊಳ್ಳೇಗಾಲ ಕಡೆಯಿಂದ ಮಾದಾಪುರ ಕಡೆಗೆ ಬರುತ್ತಿತ್ತು. ಮಾವಿನಹಳ್ಳಿ ಗೇಟಿಗೂ ಮಾದಾಪುರ ಗ್ರಾಮಕ್ಕೂ ಇರುವ ಅಂತರ ನನಗೆ ಗೊತ್ತಿರುವುದಿಲ್ಲ. ಮಾವಿನಹಳ್ಳಿ ಗೇಟಿನಿಂದ ತಲಕಾಡು ಪೋಲಿಸ್ ಠಾಣೆಗೆ ತೆಗೆದುಕೊಂಡ ಹೋದ ಸಮಯ ನನಗೆ ನೆನಪಿಲ್ಲ. ದೊರೆತ ಅಕ್ಕಿ ಪ್ಲಾಸ್ಟಿಕ್ ಚೀಲದಲ್ಲಿ ಇತ್ತು. ಚೀಲದ ಗುರುತಿನ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿರುವ ಬಗ್ಗೆ ನನಗೆ ನೆನಪಿಲ್ಲ. ಚಾಸಾ.1 ರವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡುವ ತನಕ ದೊರೆತ ಅಕ್ಕಿ ಪಡಿತರ ಅಕ್ಕಿ ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಠಾಣಾ ಅಧಿಕಾರಿಗಳು ರಾಸಾಯನಿಕ ಪರೀಕ್ಷೆಗಾಗಿ ಅಕ್ಕಿಯನ್ನು ತೆಗೆದುಕೊಂಡಿರುತ್ತಾರೆ. 2 ಕೆ.ಜಿ. ಅಕ್ಕಿಯನ್ನು ಪ್ರತ್ಯೇಕ ಮಾಡಿರುತ್ತಾರೆ. ಚೀಲದ ಮೇಲೆ ಪಡಿತರ ಅಕ್ಕಿ ಎಂದು ನಮೂದು ಇರುವುದಿಲ್ಲ. ಮಹಜರ್ ಗೆ ನಾನು ಸ್ಥಳದಲ್ಲೇ ಸಹಿ ಮಾಡಿರುತ್ತೇನೆ. ಮಹಜರ್ ಗೆ ನಾನು ಸಹಿ ಮಾಡಿರುವುದಿಲ್ಲ ಹಾಗೂ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಪ್ರಕರಣ್ಣು ದಾಖಲು ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಲಷಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಹಿರಿಯ ಅಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**